



ರಾಯಬಾಗ ಪಟ್ಟಣದ ಗ್ರಂಥಾಲಯದಲ್ಲಿ ಓದುಗರು

## ಶಾಹೂ ಮಹಾರಾಜರ ಗ್ರಂಥಾಲಯ

ರಾಯಬಾಗ ಪಟ್ಟಣದಲ್ಲಿ 1931ರಲ್ಲಿ ಕೊಲ್ಹಾಪುರದ ಶಾಹೂ ಮಹಾರಾಜರು ಗ್ರಂಥಾಲಯ ಆರಂಭಿಸಿದ್ದಾರೆ. ಬ್ರಿಟಿಷರು ಭಾರತ ಬಿಟ್ಟು ಹೋದ ಮೇಲೆ ಈ ಕಟ್ಟಡವನ್ನು ತಾಲ್ಲೂಕು ಮಟ್ಟದ ನ್ಯಾಯಾಲಯಕ್ಕೆ ಬಳಸಿಕೊಳ್ಳಲಾಯಿತು. 1960ರಲ್ಲಿ ನ್ಯಾಯಾಲಯ ಕಟ್ಟಡ ಕಟ್ಟಿದ ಮೇಲೆ ಮತ್ತೆ ಅಲ್ಲೇ ಗ್ರಂಥಾಲಯ ಪುನರುಜ್ಜೀವನ ಪಡೆಯಿತು.

1900ಕ್ಕೂ ಮುಂಚೆ ರಚನೆಗೊಂಡ ಬೈಂಡಿಂಗ್ ಗ್ರಂಥಗಳು ಇಲ್ಲಿ ಲಭ್ಯ. 37 ಸಾವಿರ ಪುಸ್ತಕಗಳಿದ್ದು, ನ್ಯಾಯಾಂಗ ವ್ಯವಸ್ಥೆಗೆ ಸಂಬಂಧಿಸಿದ ಗ್ರಂಥಗಳು ಇಲ್ಲಿ ಹೆಚ್ಚಿವೆ. ನ್ಯಾಯಾಲಯ– ಗ್ರಂಥಾಲಯದ ಮಿಶ್ರಣದಂತಿದೆ.

ನಾಲ್ಕು ವರ್ಷದ ಹಿಂದೆ ಡಿಜಿಟಲ್ ಸ್ವರೂಪ ಪಡೆದಿದೆ. ಇದರಲ್ಲಿ 1.50 ಲಕ್ಷ ಪುಸ್ತಕಗಳಿವೆ. ಬಯಲು ಗ್ರಂಥಾಲಯದಲ್ಲಿ ಕೂಡ 20 ಜನ ಕುಳಿತುಕೊಂಡು ಓದುವ ವ್ಯವಸ್ಥೆ ಇದೆ. 1,220 ಸದಸ್ಯರು ಈ ಒಂದೇ ಗ್ರಂಥಾಲಯಕ್ಕೆ ಇದ್ದಾರೆ.

ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿ, ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿ, ಚನ್ನಮ್ಮನ ಕಿತ್ತೂರು ಪಟ್ಟಣಗಳಲ್ಲಿ ಗ್ರಂಥಾಲಯ ಇಲಾಖೆ ಅಭಿವೃದ್ಧಿಪಡಿಸಿದೆ. 'ಅಗ್ನಿವೀರ' ಪರೀಕ್ಷೆಗೆ ಬೇಕಾದ ಪುಸ್ತಕಗಳನ್ನೇ ಈ ಮೂರೂ ಗ್ರಂಥಾಲಯಗಳಲ್ಲಿ ಹೆಚ್ಚಾಗಿ ಇಟ್ಟಿರುವುದು ವಿಶೇಷ.

ಅನನ್ಯ ಉತ್ತರಿಸುತ್ತಿದ್ದಳು. ಪುಟಾಣಿಗಳಿಬ್ಬರೂ ನೆರಳಿನಡಿ ಹೊರಳಾಡಿಕೊಂಡು ಈ ಪಾಠ ಕಲಿಯುತ್ತಿದ್ದರು.

ಅದನ್ನು ಕಂಡು ಬಯಲು ಗ್ರಂಥಾಲಯದ ಉದ್ದೇಶ ಈಡೇರಿದೆ ಅನ್ನಿಸಿತು. ಕಟ್ಟಡದ ಒಳಗೆ ಡಿಜಿಟಲ್ ಗ್ರಂಥಾಲಯ– ಹೊರಗೆ ಫಿಸಿಕಲ್ ಗ್ರಂಥಾಲಯದ ಕಲ್ಪನೆ ಸೊಗಸಾಗಿದೆ.

ಖಾನಾಪುರ ತಾಲ್ಲೂಕಿನ ಕಾಡಿನ ಸೆರಗಲ್ಲಿ ಅವಿತುಕೊಂಡ ಈ ಗ್ರಾಮ ಪಂಚಾಯಿತಿ ಹಾಗೂ ಗ್ರಂಥಾಲಯ; ಎರಡೂ ಅಚ್ಚರಿಗೊಳಿಸುತ್ತವೆ. ಅರ್ಧ ಎಕರೆ ಜಾಗದಲ್ಲಿ ಗ್ರಾಮ ಪಂಚಾಯಿತಿ ಸುಸಜ್ಜಿತ ಕಟ್ಟಡ, ಆವರಣದಲ್ಲಿ ಪೇವರ್ಸ್, ಸುತ್ತ ಕಾಂಪೌಂಡ್, ಹುಲ್ಲುಹಾಸು, ಮುಂದೆ ಹೂದೋಟ, ಪಕ್ಕದಲ್ಲಿ ಪಾರ್ಕಿಂಗ್, ಪ್ರತಿಭಟನೆ ಮಾಡುವವರಿಗೆ, ಧ್ವಜಾರೋಹಣಕ್ಕೆ, ವೇದಿಕೆ ಕಾರ್ಯಕ್ರಮಕ್ಕೆ ಏನು ಬೇಕೋ ಎಲ್ಲವನ್ನೂ ಅಚ್ಚುಕಟ್ಟಾಗಿ ಮಾಡಿಕೊಂಡಿದ್ದಾರೆ ಊರಿನ ಜನ.

ಇದರ ಪಕ್ಕದಲ್ಲೇ ಮೂರು ಗುಂಟೆ ಜಾಗದಲ್ಲಿ ಗ್ರಂಥಾಲಯ ಕಟ್ಟಿಸಿದ್ದಾರೆ. ಒಪ್ಪ ಓರಣವಾಗಿ ಜೋಡಿಸಿದ ಪುಸ್ತಕ, ಚಿಕ್ಕವರಿಗೆ ಪುಟಾಣಿ ಕುರ್ಚಿಗಳು, ಹಿರಿಯರಿಗೆ ಸೋಫಾ, ದೊಡ್ಡವರಿಗೆ ಟೇಬಲ್, ಕುಡಿಯುವ ನೀರಿಗೆ ಬೋರ್‌ವೆಲ್, ಆಟದ ಸಾಮಗ್ರಿ ಎಲ್ಲವೂ ಇದೆ.

ಬಯಲು ಗ್ರಂಥಾಲಯ ಎಂಬ ವಿಶೇಷ ಪ್ರಯೋಗ ಮಾಡಿ ಯಶಸ್ವಿಯಾಗಿದ್ದು ಈ ಊರಿನ ಹಿರಿಮೆ. ಗ್ರಂಥಾಲಯದ ಪಕ್ಕದಲ್ಲೇ ಎರಡು ಗುಂಟೆ ಜಾಗ, ಮಧ್ಯದಲ್ಲಿ ಪುರಾತನ ಬಾವಿ ಇದೆ. ಜನ ಕಸ ಎಸೆಯಲು ಈ ಜಾಗ ಬಳಸಿಕೊಳ್ಳುತ್ತಿದ್ದರು. ಬಾವಿ ತುಂಬ ನೀರಿದ್ದ ಕಾರಣ ಮಕ್ಕಳನ್ನು ಹತ್ತಿರವೂ ಬಿಡುತ್ತಿರಲಿಲ್ಲ. ನಿರುಪಯುಕ್ತವಾಗಿದ್ದ ಈ ಬಾವಿ ಹಾಗೂ ಜಾಗವನ್ನೇ ಬಳಸಿಕೊಂಡು ಸುಂದರ ಬಯಲು ಗ್ರಂಥಾಲಯ ಮಾಡಿದ್ದಾರೆ.

2020ರಲ್ಲಿ ಈ ಊರಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಕೆ.ಎಸ್. ಗಣೇಶ ಅವರ ಕನಸಿನ ಕೂಸು ಇದು. ಪಿಡಿಒ ಒಬ್ಬರ ಇಚ್ಛಾಶಕ್ತಿಯಿಂದ ಗ್ರಾಮದ ಕಸವೂ ರಸವಾಗಿ, ಓದಿನ ಮನೆಯಾಗಿ ಪರಿವರ್ತನೆ ಆಗಿದ್ದನ್ನು ಇಲ್ಲಿ ಪ್ರಮಾಣಿಸಿ ನೋಡಬಹುದು.

ಕಬ್ಬಿಣದ ಕಟಂಜರಿಗಳಿಂದ ಬಾವಿಯ ಬಾಯಿ ಮುಚ್ಚಿದ್ದು, ಮಕ್ಕಳು ಅದರ ಮೇಲೆ ಕುಣಿದಾಡಿದರೂ ಅಪಾಯ ಆಗದಂತೆ ಮಾಡಿದ್ದಾರೆ. ಸುತ್ತಲೂ ಹುಲ್ಲುಹಾಸು ಮಾಡಿಸಿ ಚಿಣ್ಣರು ಓಡಲು, ನೆಗೆಯಲು, ಕುಣಿಯಲು ಅನುಕೂಲ ಮಾಡಿದ್ದಾರೆ. ಗೋಡೆ– ಕಾಂಪೌಂಡುಗಳ ಮೇಲೆ ಪ್ರಾಣಿ, ಪಕ್ಷಿ, ವನಸಿರಿಯ ಚಿತ್ರ ಬಿಡಿಸಿದ್ದಾರೆ. ಗುಂಪು ಚರ್ಚೆಗಾಗಿ ನಾಲ್ಕೂ ಮೂಲೆಗಳಲ್ಲಿ ಜಾಗ ಮಾಡಿದ್ದಾರೆ. ದನಕರುಗಳು, ನಾಯಿಗಳು ಒಳಹೋಗದಂತೆ ಗೇಟಿಗೆ ಕೀಲಿ ಇದೆ.

ಚಿಣ್ಣರ ಮನಸ್ಸು ಸೆಳೆಯಲು ಏನು ಬೇಕೋ ಎಲ್ಲವೂ ಈ ಗ್ರಂಥಾಲಯದಲ್ಲಿದೆ. ಚಿಕ್ಕ ಜಾಗವನ್ನೇ ಚೊಕ್ಕಟವಾಗಿ ಬಳಸಿಕೊಂಡಿದ್ದಾರೆ. ಈಗಿನ ಪಿಡಿಒ ಎಚ್.ಎಂ. ಪ್ರಸನ್ನಕುಮಾರ್ ಕೂಡ ಮತ್ತಷ್ಟು




ಬೈಲಹೊಂಗಲ ತಾಲ್ಲೂಕಿನ ದಾಸ್ತಿಕೊಪ್ಪ ಗ್ರಾಮದ ಗ್ರಂಥಾಲಯ